**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿ.ಸಿ.ನಂಬರಃ 348/2018**

C.W -6

Pw-4

**ಸಾಕ್ಷಿದಾರರ ಹೆಸರು** : ಅಬ್ದುಲ್ ರಸೀದ್

**ತಂದೆಯ ಹೆಸರು** : ಎಂ ಇಮಾಮ್ ಸಾಬ

**ವಯಸ್ಸು** : 55 ವರ್ಷ

**ಉದ್ಯೋಗ** : ನಿವೃತ್ತ

**ವಾಸ** : ಹರಿಹರ

**ದಿನಾಂಕಃ 03.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಅ ಅ ಸ ವಕೀಲರಿಂದ**

**ಕಲಂ 299 ಸಿ ಆರ್ ಪಿ ಸಿ ಅಡಿಯಲ್ಲಿ ಪಡೆದ ಸಾಕ್ಷಿ**

1. 1996 ರಿಂದ 2020 ರವರೆಗೆ ಓಂ ಟ್ರಾನ್ಸ ಪರ್ಟನಲ್ಲಿ ವ್ಯವಸ್ಥಾಕನೆಂದು ಕೆಲಸ ಮಾಡುತ್ತಿದ್ದೆ. ಅದರ ಮಾಲೀಕರು ಜಿ ರಾಜಾಶವಕುಮಾರ ಅಂದರೆ ಚಾಸಾ -1 ರವರು ಇದ್ದರು. ಅದೇ ರೀತಿ ಚಾಸಾ-7 ವರು ನನ್ನ ಜೊತೆ ಕೆಸಲ ಮಾಡುತ್ತಿದ್ದರು.

2. ಕುಮಾರ ಪಟ್ಟಣಂ ದಿಂದ ತಮಿಳು ನಾಡಿನ ಬಲ್ಲಾಚಿಗೆ ಫೈಬರ್ ಬೇಲನ್ನು ವರ್ಗಾವಣೆ ಮಾಡುವ ಕುರಿತು ಮಬಾರಕ್ ಟ್ರಾನ್ಸ ಪೋರ್ಟನಿಂದ ಲಾರಿಯನ್ನು ತರಿಸಿಕೊಂಡಿದ್ದೆವು. ದಿಃ 11-10-2003 ರಲ್ಲಿ ಲಾರಿಗೆ ಸದರಿ ಲೋಡನ್ನು ಹಾಕಿ ನಂತರ ಲಾರಿ ಇಲ್ಲಿಂದ ಹೋಗಿದ್ದು ಆದರೆ ನಿಗದಿತ ಸ್ಥಳಕ್ಕೆ ಸದರಿ ಲಾರಿ ಹೋಗಿರಲಿಲ್ಲ. ನಂತರ ನಾವು ಕುಮಾರಪಟ್ಟಣಂ ಪೋಲಿಸ್ ಠಾಣೆಗೆ ಚಾಸಾ-1 ರವರು ದೂರನ್ನು ದಾಖಲಿಸಿರುತ್ತಾರೆ. ಚಾಸಾ-1 ಇವರ ಸಹಿಯನ್ನು ನೋಡಿ ಗುರುತಿಸುತ್ತೇನೆ. ಈಗ ನನಗೆ ತೋರಿಸಲಾದ ದೃಡೀಕೃತ ಪ್ರತಿ ಅದನ್ನು ನಿಪಿ-9 ಎಂದು ಗುರುತಿಸಲಾಯ್ತು. ಒಟ್ಟು 42 ಫೈಬರ್ ಬೇಲಗಳನ್ನು ಇಲ್ಲಿಂದ ವರ್ಗಾಣೆಗಾಗಿ ಕಳುಹಿಸಿಕೊಡಲಾಗಿತ್ತು. ಲೋಡ್ ಮಾಡಿಕೊಂಡು ಹೋದ ಲಾರಿ ಚಾಲಕನ್ನು ನೋಡಿ ಗುರುತಿಸುತ್ತೇನೆ. ಅದೇ ರೀತಿ ಲಾರಿಯನ್ನು ಕೂಡಾ ನೋಡಿದರೆ ಗುರುತಿಸುತ್ತೇನೆ.

3. ಈ ಎಲ್ಲ ವಿಚಾರಕ್ಕಾಗಿ ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ನನ್ನ ಪೂರವಣಿ ಹೇಳಿಕೆಯನ್ನು ಕೂಡಾ ಪೋಲಿಸರಿಗೆ ಹೇಳಿರುತ್ತೇನೆ.

**ಆರೋಪಿ ತಲೆ ಮರಿಸಿಕೊಂಡಿದ್ದರಿಂದ ಆತ ಪರ ಪಾಟೀ ಸವಾಲು ಪಡೆದಿಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ರಾಣೇಬೆನ್ನೂರು.**
**ಸಿ.ಸಿ.ನಂಬರಃ 348/2018**

C.W -7
Pw-5

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೇವರಾಯ್ |
| **ತಂದೆಯ ಹೆಸರು** | : | ಲೇಟ್ ಜಿ ನಾರಾಯಣ |
| **ವಯಸ್ಸು** | : | 62 ವರ್ಷ |
| **ಉದ್ಯೋಗ** | : | ನಿವೃತ್ತ ಪಿ ಎಸ್ ಐ |
| **ವಾಸ** | : | ಶಿವಮೊಗ್ಗ |

**ದಿನಾಂಕಃ 03.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಅ ಅ ಸ ವಕೀಲರಿಂದ**

**ಕಲಂ 299 ಸಿ ಆರ್ ಪಿ ಸಿ ಅಡಿಯಲ್ಲಿ ಪಡೆದ ಸಾಕ್ಷಿ**

1. ನಾನು ದಿಃ 30-07-2007 ರಿಂದ 12-04-2008 ರವರೆಗೆ ಪಿ ಎಸ್ ಐ ಕುಮಾರಪಟ್ಟಣಂ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 29-10-2007 ರಂದು ಈ ಪ್ರಕರಣದ ಕಡತವನ್ನು ಈ ಹಿಂದೆ ಇದ್ದ ಪಿ ಎಸ್ ಐ ಕೆ ಸಿ ಗೀರಿ ರವರಿಂದ ಕಡತವನ್ನು ಪಡೆದು ಅವುಗಳನ್ನು ಪರೀಶಿಲನೆ ಮಾಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯದ ಆದೇ ನಂ. 134107 ದಿಃ 14-02-2006 ರಂತೆ ಕುಮಾರಪಟ್ಟಣ ಗುನ್ನಾ ನಂ. 85/03 ಕಲಂ 420 ಐ ಪಿ ಸಿ ಪರಾರಿಯಾಗಿದ್ದ ಆರೋಪಿ ನಂ. 4 ಮತ್ತು 5 ರವರ ಮೇಲೆ ಹೆಚ್ಚುವರಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಕಾಗದ ಪತ್ರಗಳನ್ನು ಪರಿಶೀಲಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

2. ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಅದನ್ನು ನಿಪಿ-8 ಎಂದು ಗುರುತಿಸಲಾಗಿದೆ. ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಅದನ್ನು ನಿಪಿ-9

ಎಂದು ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಗಿದೆ. ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಗಿದೆ.

**ಆರೋಪಿ ತಲೆ ಮರಿಸಿಕೊಂಡಿದ್ದರಿಂದ ಆತ ಪರ ಪಾಟೀ ಸವಾಲು ಪಡೆದಿಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**